# ನಿಮ್ಮೊಡನೆ

## ಜೀವನ ಸಂಜೆಯಲ್ಲಿ ಅಸಹಾಯಕತೆಯ ಬಿಂಬಗಳು ನೆನಪಾಗಬೇಕಿದೆ ಮಾನವೀಯತೆಯ ಪಾಠಗಳು

**ಯುವಜನರನ್ನು ಕೇಂದ್ರದಲ್ಲಿರಿಸಿಕೊಂಡಿರುವ ವರ್ತಮಾನ, ಹಿರಿಯ ನಾಗರಿಕರನ್ನು ಅಂಚಿನಲ್ಲಿರಿಸಿದೆ. ಆಹಾರ ಹಾಗೂ ಚಿಕಿತ್ಸೆಯ ಸಮಸ್ಯೆ ಮಾತ್ರವಲ್ಲ, ಸಾಂಗತ್ಯದ ಕೊರತೆಯನ್ನೂ ಬಹಳಷ್ಟು ಹಿರಿಯರು ಅನುಭವಿಸುತ್ತಿದ್ದಾರೆ. ಹಿರಿಯರ ಬಗ್ಗೆ ಒಟ್ಟಾರೆ ಸಮಾಜವೇ ಜಡವಾಗಿರುವಂತೆ ಕಾಣಿಸುತ್ತಿರುವ ದಿನಗಳಿವು.**

ಭಾರತೀಯ ಸಮಾಜದ ಬಹುದೊಡ್ಡ ಶಕ್ತಿಯಿರುವುದು ಅದು ಈವರೆಗೆ ಜತನ ಮಾಡಿಕೊಂಡು ಬಂದಿರುವ ಕೌಟುಂಬಿಕ ಮೌಲ್ಯಗಳಲ್ಲಿ. ಮಕ್ಕಳಲ್ಲಿ ದೇವರನ್ನು ಕಾಣುವುದರ ಜೊತೆಗೆ, ತಾಯಿ–ತಂದೆಯನ್ನು ದೈವದ ರೂಪದಲ್ಲಿ ನೋಡುವುದನ್ನೂ ನಮ್ಮ ಸ್ಮೃತಿಗಳು ಹೇಳಿಕೊಟ್ಟಿವೆ, ಪೂರ್ವಸೂರಿಗಳು ಬದುಕಿ ತೋರಿಸಿದ್ದಾರೆ. ಕುರುಡು ತಂದೆತಾಯಿಯನ್ನು ಹೆಗಲ ಮೇಲೆ ಹೊತ್ತು ತೀರ್ಥಯಾತ್ರೆ ಮಾಡಿಸಿದ ಶ್ರವಣಕುಮಾರ ಹಾಗೂ ತಂದೆಯ ಮಾತನ್ನು ನಡೆಸಿಕೊಡಲಿಕ್ಕಾಗಿ ಕಿರೀಟದ ಬದಲು ಕಾಡಿನವಾಸವನ್ನು ಆಯ್ದುಕೊಂಡ ರಾಮ ಒಳಗೊಂಡಂತೆ, ಹಿರಿಯರನ್ನು ಆದರಿಸುವ ಹಲವು ಮಾದರಿಗಳು ನಮ್ಮ ಪುರಾಣಗಳಲ್ಲಿವೆ. ಶ್ರವಣಕುಮಾರ ಹಾಗೂ ರಾಮನ ಕಥನಗಳು ಮಹಾತ್ಮ ಗಾಂಧಿಯವರ ಬದುಕನ್ನೂ ಪ್ರಭಾವಿಸಿವೆ. ಈ ಪರಂಪರೆ ಈಗ ಮುಕ್ಕಾಗುತ್ತಿದೆಯೆ?

ಆಸ್ತಿಯನ್ನು ತಮ್ಮ ಹೆಸರಿಗೆ ಬರೆಸಿಕೊಂಡ ನಂತರ ಕೆಲವು ಮಕ್ಕಳು ವೃದ್ಧ ಪೋಷಕರನ್ನು ಆಸ್ಪತ್ರೆಗಳಲ್ಲಿ ಬಿಟ್ಟು ಹೋಗುತ್ತಿರುವ ಪ್ರಕರಣಗಳು ರಾಜ್ಯದಲ್ಲಿ ವರದಿಯಾಗುತ್ತಿವೆ. ಇಂಥ 150ಕ್ಕೂ ಹೆಚ್ಚು ಪ್ರಕರಣಗಳು ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಯೊಂದರಲ್ಲೇ ನಡೆದಿವೆ. ರಾಜ್ಯದ ಇತರ ವೈದ್ಯಕೀಯ ಸಂಸ್ಥೆಗಳಲ್ಲಿ 100ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಈ ಅಧಿಕೃತ ಸಂಖ್ಯೆಯಾಚೆಗೆ, ಲೆಕ್ಕಕ್ಕೆ ಸಿಗದೆ ಬೀದಿಪಾಲಾಗಿರುವ ಹಿರಿಯರು ಸಾಕಷ್ಟಿದ್ದಾರೆ. ಬಸ್ ನಿಲ್ದಾಣಗಳಲ್ಲೋ, ಜನನಿಬಿಡ ಪೇಟೆಬೀದಿಗಳಲ್ಲೋ ಎದುರಾಗುವ ಅಜ್ಜ ಅಜ್ಜಿಯರ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡಿದರೆ, ಅಲ್ಲಿ ಕಾಣಿಸುವ ಅಸಹಾಯಕತೆ ದಿಗಿಲು ಹುಟ್ಟಿಸುವಂತಿರುತ್ತದೆ; ನಮ್ಮ ನವ ನಾಗರಿಕತೆಯ ನಾಜೂಕುತನವನ್ನೆಲ್ಲ ಬಯಲು ಮಾಡುವಂತಿರುತ್ತದೆ.

ಪೋಷಕರನ್ನು ಆಸ್ಪತ್ರೆಪಾಲು ಮಾಡಿ ನಾಪತ್ತೆಯಾಗುವ ಮಕ್ಕಳ ಅಮಾನವೀಯ ಕೃತ್ಯಗಳಿಗೆ ತಡೆಹಾಕುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆ. ‘ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ–2007’ರ ಸೆಕ್ಷನ್ 9ರ ಅಡಿಯಲ್ಲಿ, ತಮ್ಮ ಯೋಗಕ್ಷೇಮ ನಿರ್ಲಕ್ಷಿಸುವ ಮಕ್ಕಳ ವಿರುದ್ಧ ಪೋಷಕರು ದೂರು ನೀಡಬಹುದಾಗಿದೆ. ಸೆಕ್ಷನ್ 23ರ ಪ್ರಕಾರ, ಮಕ್ಕಳ ಅಥವಾ ಸಂಬಂಧಿಕರ ಹೆಸರಿನಲ್ಲಿ ಬರೆದಿರುವ ವಿಲ್ ಅಥವಾ ದಾನಪತ್ರವನ್ನು ರದ್ದುಗೊಳಿಸಿ, ಆಸ್ತಿಯ ಹಕ್ಕನ್ನು ಪೋಷಕರ ಹೆಸರಿಗೆ ಮರು ಸ್ಥಾಪಿಸಬಹುದಾಗಿದೆ. ಈ ಕಾಯ್ದೆಯ ಪರಿಣಾಮಕಾರಿ ಬಳಕೆಯ ಮೂಲಕ ಪೋಷಕರ ನಿರ್ವಹಣೆ ತಮ್ಮ ಹೊಣೆ ಎನ್ನುವುದನ್ನು ಮಕ್ಕಳಿಗೆ ನೆನಪಿಸುವ ಕೆಲಸವನ್ನು ಸರ್ಕಾರ ಆರಂಭಿಸಿದೆ.

ವೃದ್ಧಾಪ್ಯದಲ್ಲಿ ಆಸರೆಯಾಗಬೇಕಾದ ಮಕ್ಕಳು ತಮ್ಮ ಹಿತಾಸಕ್ತಿಯನ್ನಷ್ಟೇ ನೋಡಿಕೊಂಡು ಹೆತ್ತವರನ್ನು ನಿರ್ಲಕ್ಷಿಸುವುದು ಅಮಾನವೀಯ ಹಾಗೂ ನಂಬಿಕೆದ್ರೋಹ. ಅಪ್ಪ–ಅಮ್ಮನ ಪ್ರೀತಿ ಕಾಳಜಿಯಲ್ಲಿ ಬೆಳೆಯುವ ಮಕ್ಕಳ ಪಾಲಿಗೆ ಮುಂದೊಂದು ದಿನ ಅವರ ಪೋಷಕರೇ ಮಕ್ಕಳಾಗುವುದು ಜೀವನಚಕ್ರದಲ್ಲಿ ಸಹಜವಾದ ವಿದ್ಯಮಾನ. ಇದನ್ನು ಕಾನೂನಿನ ಮೂಲಕ ನೆನಪಿಸಬೇಕು ಎನ್ನುವ ಸ್ಥಿತಿ ರೂಪುಗೊಂಡಿರುವುದು ಯುವ ತಲೆಮಾರು ಸಂವೇದನಾಶೂನ್ಯವಾಗುತ್ತಿದೆಯೇ ಎನ್ನುವ ಅನುಮಾನ ಹುಟ್ಟಿಸುವಂತಿದೆ.

ಹಿರಿಯ ನಾಗರಿಕರ ನಿರ್ಲಕ್ಷ್ಯವನ್ನು ಕೌಟುಂಬಿಕ ಸಮಸ್ಯೆ ಎಂದಷ್ಟೇ ನೋಡಲಾಗದು. ಯುವಜನರನ್ನು ಕೇಂದ್ರದಲ್ಲಿರಿಸಿಕೊಂಡಿರುವ ವರ್ತಮಾನ, ಹಿರಿಯರನ್ನು ಅಂಚಿನಲ್ಲಿರಿಸಿದೆ. ಹಿರಿಯ ನಾಗರಿಕರ ಯೋಗಕ್ಷೇಮಕ್ಕೆಂದು ಸರ್ಕಾರ ಕೆಲವು ಯೋಜನೆಗಳನ್ನೇನೋ ರೂಪಿಸಿದೆ. ಆದರೆ, ಅವುಗಳ ಅನುಷ್ಠಾನ ಸಮರ್ಪಕವಾಗಿಲ್ಲ. ಬ್ಯಾಂಕು, ಅಂಚೆ ಕಚೇರಿಗಳಲ್ಲಿ ಸೋತ ಕಣ್ಣುಗಳ ಹಿರಿಯರನ್ನು ಅಧಿಕಾರಿಗಳು ಉದಾಸೀನದಿಂದ ನಡೆಸಿಕೊಳ್ಳುವ ದೃಶ್ಯಗಳು ಸಹಜ ಎನ್ನುವಂತಾಗಿದೆ. ಸಾರ್ವಜನಿಕ ಸ್ಥಳಗಳು ಹಿರಿಯ ನಾಗರಿಕರ ಸುಗಮ ಸಂಚಾರಕ್ಕೆ, ಸುಲಭ ಬಳಕೆಗೆ ತಕ್ಕಂತೆ ರೂಪುಗೊಂಡಿಲ್ಲ. ಕೊರೊನಾ ಅವಧಿಯಲ್ಲಿ ರದ್ದಾಗಿದ್ದ ರೈಲ್ವೆ ಪ್ರಯಾಣದಲ್ಲಿನ ರಿಯಾಯಿತಿಯನ್ನು ಹಿರಿಯ ನಾಗರಿಕರಿಗೆ ಮತ್ತೆ ನೀಡಲು ಸರ್ಕಾರ ಸಾಕಷ್ಟು ಸತಾಯಿಸಿದ್ದನ್ನೂ ನೆನಪಿಸಿಕೊಳ್ಳಬೇಕು. ಹಿರಿಯರ ಬಗ್ಗೆ ಒಟ್ಟಾರೆ ಸಮಾಜವೇ ಜಡವಾಗಿರುವಂತೆ ಕಾಣಿಸುತ್ತಿರುವ ದಿನಗಳಿವು.

ಆಹಾರ ಹಾಗೂ ಚಿಕಿತ್ಸೆಯ ಸಮಸ್ಯೆ ಮಾತ್ರವಲ್ಲ, ಸಾಂಗತ್ಯದ ಕೊರತೆಯನ್ನೂ ಬಹಳಷ್ಟು ಹಿರಿಯರು ಅನುಭವಿಸುತ್ತಿದ್ದಾರೆ. ಎಲ್ಲರ ಕೈಗಳಿಗೆ ಅಂಟಿಕೊಂಡಿರುವ ಮೊಬೈಲ್ ಫೋನ್‌ಗಳು ಹಿರಿಯರು ಮತ್ತು ಕಿರಿಯರ ನಡುವಿನ ಅಂತರ ಹೆಚ್ಚಲು ಪ್ರಮುಖ ಕಾರಣವಾಗಿವೆ. ಸಂಗಾತಿಯನ್ನು ಕಳೆದುಕೊಂಡು ಒಂಟಿಯಾದ ಹಿರಿಯ ನಾಗರಿಕರು ಅನುಭವಿಸುವ ಏಕಾಕಿತನ ಊಹೆಗೆ ನಿಲುಕುವಂತಹದ್ದಲ್ಲ. ಉದ್ಯೋಗ, ಗಳಿಕೆಯ ಒತ್ತಡದಲ್ಲಿ ಮುಳುಗಿರುವ ಮಕ್ಕಳು, ಪಠ್ಯ ಪಠ್ಯೇತರ ಚಕ್ರವ್ಯೂಹದಲ್ಲಿ ಬಾಲ್ಯವನ್ನು ಕಳೆದುಕೊಂಡ ಮೊಮ್ಮಕ್ಕಳು – ಇವರುಗಳ ನಡುವೆ ಮನೆಯಲ್ಲಿನ ಹಿರಿಯರಿಗೆ ತಮ್ಮ ಅಸ್ತಿತ್ವದ ಪ್ರಶ್ನೆ ಕಾಡತೊಡಗಿ ಮಾನಸಿಕ ತಬ್ಬಲಿತನ ಕಾಡಿದರೆ, ಅದು ಅಸಹಜವೇನಲ್ಲ.

ಹಿರಿಯ ನಾಗರಿಕರ ನಿರ್ಲಕ್ಷ್ಯ ಯಾವುದೇ ಸಮಾಜಕ್ಕೆ ಗೌರವ ತರುವಂತಹದ್ದಲ್ಲ. ಮಾನವೀಯತೆಯ ಪಾಠಗಳನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುವುದು ಇಂದಿನ ಅಗತ್ಯ.

■ ರಘುನಾಥ ಚ.ಹ.

